# ಜ್ಞಾನಬೋಧೆಯ ವಿನೂತನ ಪ್ರಯೋಗ – ಪಂಚತಂತ್ರ

**ಸಾಯಿಲತಾ ಇ. ಮಡಿವಾಳರ***

**DOI: https://doi.org/10.5281/zenodo.21438280**

**ABSTRACT**

ಭಾರತೀಯ ಕಥಾಸಾಹಿತ್ಯದಲ್ಲಿ 'ಪಂಚತಂತ್ರ'ವು ಜ್ಞಾನಬೋಧೆಯ ಅತ್ಯಂತ ವಿಶಿಷ್ಟ ಹಾಗೂ ವಿನೂತನ ಪ್ರಯೋಗವಾಗಿದೆ. ಪ್ರಾಚೀನ ಕಾಲದ ಮೌಖಿಕ ಕಥನ ಪರಂಪರೆಯಿಂದ ಬೆಳೆದುಬಂದ ಈ ಕೃತಿಯು, ನೀತಿಶಾಸ್ತ್ರ ಮತ್ತು ಬದುಕಿನ ಮೌಲ್ಯಗಳನ್ನು ಪ್ರಾಣಿ–ಪಕ್ಷಿಗಳ ಪಾತ್ರಗಳ ಮೂಲಕ ಅತ್ಯಂತ ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ವಿಷ್ಣುಶರ್ಮ ಹಾಗೂ ವಸುಭಾಗಭಟ್ಟರ ಮೂಲ ಪ್ರೇರಣೆಯಿಂದ ಮೂಡಿಬಂದ ಈ ಕಥಾಗುಚ್ಛವನ್ನು ದುರ್ಗಸಿಂಹನು ಕನ್ನಡಕ್ಕೆ ತರುವ ಮೂಲಕ ಅದರ ಜಾಗತಿಕ ಮತ್ತು ಪ್ರಾದೇಶಿಕ ಮಹತ್ವವನ್ನು ವಿಸ್ತರಿಸಿದ್ದಾನೆ.

ಕಥೆಯೊಳಗೊಂದು ಕಥೆ ಎಂಬ ವಿಶಿಷ್ಟ ನಿರೂಪಣಾ ತಂತ್ರವನ್ನು ಹೊಂದಿರುವ ಪಂಚತಂತ್ರವು ಕೇವಲ ಮನರಂಜನೆಯಲ್ಲದೆ, ಮಾನವನ ಸ್ವಭಾವ, ವರ್ತನೆ, ಧರ್ಮಮಾರ್ಗ ಮತ್ತು ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಮಾರ್ಗದರ್ಶಿಯಾಗಿದೆ. ಆದರ್ಶ ಜೀವನದ ಮೌಲ್ಯಗಳನ್ನು ಜನಸಾಮಾನ್ಯರಿಗೆ ಮತ್ತು ರಾಜಕುಮಾರರಿಗೆ ತಿಳಿಹಾಸ್ಯ ಹಾಗೂ ಸೂಕ್ಷ್ಮ ವ್ಯಂಗ್ಯದ ಮೂಲಕ ತಲುಪಿಸುವಲ್ಲಿ ಈ ನೀತಿಕಥೆಗಳ ಪಾತ್ರ ಅನನ್ಯವಾಗಿದೆ.

**KEYWORDS:** ಪಂಚತಂತ್ರ, ನೀತಿಶಾಸ್ತ್ರ, ಕಥಾಸಾಹಿತ್ಯ, ದುರ್ಗಸಿಂಹ, ಜ್ಞಾನಬೋಧೆ.

* **ಪ್ರೊ. ಸಾಯಿಲತಾ ಇ. ಮಡಿವಾಳರ,** ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ರಾಜರಾಜೇಶ್ವರಿ ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು.

ಪಂಚತಂತ್ರ ಕೃತಿಯು ನಮ್ಮ ಭಾರತೀಯ ಸಾಹಿತ್ಯದಲ್ಲಿಯೇ ಅತ್ಯಂತ ವಿಶಿಷ್ಟವಾದ ಕಥಾಗುಚ್ಛವಾಗಿದೆ. ನಮ್ಮ ಪರಂಪರೆಯನ್ನು ಗಮನಿಸಿದಾಗ ಕಥೆ ಹೇಳುವ ಸಂಪ್ರದಾಯವು ಸಹಸ್ರಾರು ವರ್ಷಗಳಿಂದ ನಡೆದು ಬಂದಿರುವುದು ಸ್ಪಷ್ಟವಾಗುತ್ತದೆ. ಬಹುಶಃ ಮನುಷ್ಯ ಮಾತನಾಡಲು ಪ್ರಾರಂಭಿಸಿದಾಗಿನಿಂದಲೂ ಕಥೆ ಹೇಳುವ ಸಂಪ್ರದಾಯ ಬೆಳೆದು ಬಂದಿರಬೇಕು.

'ಕಥ್' ಎಂಬ ಧಾತುವಿನಿಂದ 'ಕಥೆ' ಎಂಬ ಪದ ಬಂದಿದೆ. ಮೂಲತಃ ಅದು "ಹೇಳತಕ್ಕದ್ದು" ಎಂಬ ಅರ್ಥವನ್ನು ಹೊಂದಿದ್ದು, ಕಾಲಾಂತರದಲ್ಲಿ ಲೇಖಿಸುವ ಪದ್ಧತಿ ಬಂದಿರಬೇಕು.

ಪ್ರಾಚೀನ ಕಾಲದಲ್ಲಿ ಮಾತು ಬಲ್ಲ ಮಾನವ ಜನಾಂಗಗಳಲ್ಲಿ ಮಾನವನು ಕಥಾ ನಿರೂಪಣೆಯನ್ನು, ಶ್ರವಣವನ್ನು ತನ್ನ ಜೀವನದ ಅವಶ್ಯಕ ಸಾಧನವೆಂಬ ರೀತಿಯಲ್ಲಿ ಬಳಸುತ್ತಲೇ ಬಂದಿದ್ದಾನೆ. ಮನೆಯಲ್ಲಿ ಹಿರಿಯರು ಚಿಕ್ಕ ಮಕ್ಕಳಿಗೆ ಊಟ ಮಾಡಿಸುವಾಗ ಕಥೆ ಹೇಳುವುದನ್ನು ನಾವೆಲ್ಲ ನೋಡಿದ್ದೇವೆ. ಕಾಡುಗಳಲ್ಲಿ ಗುಹೆಗಳಲ್ಲಿ ವಾಸಿಸುತ್ತಿದ್ದ ಕಾಡು ಮನುಷ್ಯನು ಬೇಟೆಯಾಡಿ ಬಂದ ನಂತರ ತನ್ನ ಅನುಭವಗಳನ್ನು ಸ್ವಾರಸ್ಯಕರವಾಗಿ ತನ್ನ ಜೊತೆಗಾರರಿಗೆ ರಾತ್ರಿ ಬೆಂಕಿ ಕಾಯಿಸುತ್ತಾ ಹೇಳುತ್ತಿದ್ದಿರಬೇಕು. ಈಗಲೂ ಸಹ ಸುಗ್ಗಿಯ ದಿನಗಳಲ್ಲಿ ಹೊಲಗಳಲ್ಲಿ ದುಡಿಯುವ ಹಳ್ಳಿಯ ಜನರು, ದಿನವಿಡೀ ಶ್ರಮವಹಿಸಿ ದುಡಿಯುವ ಕೂಲಿಕಾರ್ಮಿಕರು.... ಮೊದಲಾದವರು ಸರಸವಾಗಿ ಕಥೆ ಹೇಳುವುದನ್ನು, ಕೇಳುವುದನ್ನು ರೂಢಿಯಲ್ಲಿಟ್ಟುಕೊಂಡಿದ್ದಾರೆ.

ಪ್ರತಿಯೊಂದು ದೇಶದಲ್ಲಿಯೂ ಅದಕ್ಕೆ ವಿಶಿಷ್ಟವಾದ ಕಥೆಗಳಿರುತ್ತವೆ. ಭಾರತವಂತೂ ಕಥೆ ಹೇಳುವ ಸಂಪ್ರದಾಯಕ್ಕೆ ತವರುಮನೆಯೆಂದೇ ಹೇಳಬೇಕು. ಭಾರತೀಯ ಕಥಾ ಪ್ರಪಂಚವು ಲಿಖಿತ ಹಾಗೂ ಅಲಿಖಿತ ಸ್ವರೂಪಗಳೆರಡರಲ್ಲೂ ಸಮೃದ್ಧವಾಗಿದೆ. ರಾಮಾಯಣ, ಮಹಾಭಾರತ, ಭಾಗವತ, ಉಪನಿಷತ್ತು, ಬೃಹತ್ಕಥೆ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಲಿಖಿತ ಸ್ವರೂಪದ ಕಥಾ ಸಾಹಿತ್ಯವನ್ನು ಕಾಣುತ್ತೇವೆ.

ದುರ್ಗಸಿಂಹನ ಪಂಚತಂತ್ರವು ಸಂಸ್ಕೃತ ಪಂಚತಂತ್ರದ ರೂಪಾಂತರವೆಂಬ ದೃಷ್ಟಿಯಿಂದ ಮಾತ್ರವಲ್ಲದೇ ವಸುಭಾಗಭಟ್ಟನ ಪಂಚತಂತ್ರ ಕೃತಿಯಿಂದ ಪ್ರೇರಣೆಗೊಂಡು ರಚಿಸಲಾಗಿದೆಯೆಂಬ ದುರ್ಗಸಿಂಹನ ಸ್ಪಷ್ಟವಾದ ಉಲ್ಲೇಖದಿಂದ ಮಹತ್ವವನ್ನು ಪಡೆದಿದೆ. ವಿಷ್ಣುಶರ್ಮನ ಪಂಚತಂತ್ರ ಸಂಸ್ಕೃತ ವಾಙ್ಮಯದ ಕಥಾಸಾಹಿತ್ಯದಲ್ಲಿಯೇ ಅತ್ಯಂತ ಅಪೂರ್ವವಾದ ಕೃತಿಯಾಗಿದೆ. ದುರ್ಗಸಿಂಹನ ಪಂಚತಂತ್ರವು ಅದೇ ಹೆಸರಿನ ಕನ್ನಡ ಕೃತಿಯಾಗಿದೆ.

ಹರಂ ದರಹಸಿತ ವದನಾರವಿಂದನಾಗಿ ಪಾರ್ವತಿಗಪೂರ್ವಮಪ್ಪ ಕಥೆಗಳಂ ಪೇಳುತ್ತಿರಲಾ ಕಥಾಗೋಷ್ಠಿಯೋಳ್ ಪುಷ್ಪದತ್ತನೆಂಬ ಗಣಪ್ರಧಾನನಿರ್ದಲ್ಲಮಂ ಕೇಳ್ದಾತನೆನಾನುಮೊಂದು ಕಾರಣದಿಂ ಮಾನವಲೋಕದೋಳ್ ಪುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿರ್ದು ಹರಂ ಗಿರಿಸುತೆಗೆ ಪೇಳ್ದಾ ಕಥೆಗಳಂ ಪೈಶಾಚಿಕ ಭಾಷೆಯೊಳ್ ಬೃಹತ್ಕಥೆಗಳಂ ಪೇಳ್ದೊಡವಂ ವಸುಭಾಗಭಟ್ಟಂ ಕೇಳ್ದು ಕಥಾಸಮುದ್ರದೊಳ್ ಪಂಚರತ್ನವಪ್ಪೈದು ಕಥೆಗಳನ್ನಾಯ್ದುಕೊಂಡು ಪಂಚತಂತ್ರಮೆಂದು ಪೆಸರಿಟ್ಟು ಸಮಸ್ತ ಜಗಜ್ಜನೋಪಕಾರಾರ್ಥಂ ಪೇಳ್ದನದರಿಂ

**ವಸುಭಾಗಭಟ್ಟ ಕೃತಿಯಂ**

**ವಸುಧಾಧಿಪಹಿತಮನಖಿಲ ವಿಬುಧವಸ್ತುತಮಂ**
**ಪೊಸತಾಗಿರೆ ವಿರಚಿಸುವೆಂ**
**ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ**

ವಸುಭಾಗಭಟ್ಟನ ಪಂಚತಂತ್ರ ಪರಂಪರೆಯನ್ನು ಅರಿತುಕೊಂಡು ಅದನ್ನು ಪುನರ್‌ರಚಿಸಲು ದುರ್ಗಸಿಂಹನ ಪಂಚತಂತ್ರವು ಇತರ ತತ್ಸಮಾನಾಧಾರಗಳೊಡನೆ ಸಹಾಯಕವಾಗಿರುವುದರಿಂದ ದುರ್ಗಸಿಂಹನ ಪಂಚತಂತ್ರಕ್ಕೆ ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಮಹತ್ವವಿದೆ. ವಸುಭಾಗಭಟ್ಟನಾಗಲಿ, ವಿಷ್ಣುಶರ್ಮನಾಗಲಿ ಈ ಕಥೆಗಳನ್ನು ಬರೆಯುವ ಪೂರ್ವದಲ್ಲಿ ಅವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಅಸಂಖ್ಯ ಜನರು ಹೇಳುತ್ತಾ ಬಂದಿದ್ದು, ಜನಸಾಮಾನ್ಯರಿಗೆ ಸಹಜವಾಗಿಯೇ ಅವು ಪ್ರಚಲಿತವಾಗಿರಬೇಕು. ಜಾನಪದ ಸ್ವರೂಪದ ಈ ಕಥಾಸಾಮಗ್ರಿಗೆ ಶ್ರೇಷ್ಠ ಸಾಹಿತ್ಯದ ರೂಪಕೊಟ್ಟವರು ವಸುಭಾಗಭಟ್ಟ ಮತ್ತು ವಿಷ್ಣುಶರ್ಮ.

ಪಂಚತಂತ್ರವು ಸಾವಿರಾರು ವರ್ಷಗಳಿಂದ ಓದಿದವರಿಗೆಲ್ಲ ಹಿತವಾಗಿ, ಪ್ರಿಯವಾಗಿ ಬುದ್ಧಿಯನ್ನು ಕಲಿಸಿರುವ ಕಥೆಗಳ ಗುಂಪು. ಪಂಚತಂತ್ರದ ಈ ಕಥಾರೂಪಕ್ಕೆ "ಕಲ್ಪಿತ ನೀತಿ ಕಥೆ" ಎನ್ನಬಹುದು. ಪ್ರಾಚೀನ ಕಾಲದಿಂದಲೂ ಮಾನವರು ತಮ್ಮ ನಿತ್ಯ ಜೀವನದಲ್ಲಿ ಧರ್ಮಕ್ಕೆ ವಿಶೇಷ ಮಾನ್ಯತೆ ಕೊಟ್ಟಿದ್ದಾರೆ. ನೀತಿಯ ಉಗಮ ಸ್ಥಾನವೇ ಧರ್ಮ. ಧರ್ಮವನ್ನು ಮಾನವರು ತಮ್ಮ ಹಿತಕ್ಕೂ, ಸಮಾಜದ ಕ್ಷೇಮಕ್ಕೂ ಹೇಗೆ ಸಾಧಿಸಬೇಕೆಂಬುದು ಮುಖ್ಯವಾದ ಅಂಶ. ನೀತಿಯ ಮಾರ್ಗ ಹೇಗಿರಬೇಕೆಂಬುದನ್ನು ತಿಳಿಸುವ ಶಾಸ್ತ್ರವೇ ನೀತಿಶಾಸ್ತ್ರ. ಈ ದೃಷ್ಟಿಯಿಂದಲೇ ಪಂಚತಂತ್ರ ಕೃತಿಯಲ್ಲಿ ಕಲ್ಪಿತ ನೀತಿಕಥೆಗಳು ಬಂದಿವೆ.

ವಿಡಂಬನೆ, ನಿತ್ಯಜೀವನದಲ್ಲಿ ಅನುಭವಿಸುವ ತಿಳಿಹಾಸ್ಯ, ಸೂಕ್ಷ್ಮ ವ್ಯಂಗ್ಯ, ಜ್ಞಾನ, ವ್ಯವಹಾರಿಕ ಜೀವನದ ಗಾಢ ಅನುಭವಗಳಿಗೆ ಪಂಚತಂತ್ರ ಆಗರವಾಗಿದೆ. ಇದು ತಾತ್ವಿಕವಾಗಿ, ವ್ಯವಹಾರಿಕವಾಗಿ ಮಾರ್ಗದರ್ಶನವನ್ನೀಯುವ ಅಪರೂಪದ ಕೃತಿರತ್ನವಾಗಿದೆ. ಜಾಗತಿಕ ನೀತಿ ಕಥಾ ಸಾಹಿತ್ಯದಲ್ಲಿ ಭಾರತೀಯ ಪಂಚತಂತ್ರ ಕೃತಿ ಅತ್ಯುತ್ತಮ ಗ್ರಂಥವಾಗಿದೆ.

ಪಂಚತಂತ್ರದ ನೀತಿಕಥೆಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳೇ ಪ್ರಧಾನ ಪಾತ್ರದಲ್ಲಿವೆ. ಇಲ್ಲಿನ ಕಥೆಗಳಲ್ಲಿ ಮನುಷ್ಯರು ಮಾತ್ರವಲ್ಲದೇ ಪ್ರಾಣಿ, ಪಕ್ಷಿಗಳು ಕೂಡಾ ಮನುಷ್ಯರಂತೆ ಮಾತನಾಡುತ್ತವೆ. ಜೀವನದಲ್ಲಿಯ ಸುಖ-ದುಃಖಗಳನ್ನು, ಸಮಸ್ಯೆಗಳನ್ನು, ವಿವೇಕ-ಅವಿವೇಕದ ಪರಿಣಾಮಗಳನ್ನು ಮನುಷ್ಯೇತರ ಜೀವಿಗಳ ಮುಖಾಂತರವಾಗಿ ನಿರೂಪಿಸುವುದು ಪಂಚತಂತ್ರದಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಪಂಚತಂತ್ರಕ್ಕಿಂತಲೂ ಮೊದಲು ಪೈಶಾಚಿ ಭಾಷೆಯಲ್ಲಿ ರಚಿತವಾಗಿದ್ದ ಗುಣಾಢ್ಯನ ಬೃಹತ್ಕಥೆಯಲ್ಲಿ ಪಶುಪಕ್ಷಿಗಳ ಕಥೆಗಳಿದ್ದು, ಇದೊಂದು ಜಾನಪದ ಕಥೆಗಳ ಬೃಹತ್ ಸಂಗ್ರಹವಾಗಿದೆ. ಬೃಹತ್ಕಥೆಯಲ್ಲಿ ಪಕ್ಷಿಗಳ ಕಥೆಗಳು ಮಾತ್ರವಲ್ಲದೆ ಮಾಟಗಾರರ ಕಥೆಗಳು, ಯಕ್ಷಿಣಿಯರ ಕಥೆಗಳು, ಬೇತಾಳ ಪಂಚವಿಂಶತಿ ಕಥೆಗಳು, ಮೂರ್ಖರ, ದಡ್ಡರ ಕಥೆಗಳು ಇವೆ. ವಿವಿಧ ರೀತಿಯ ಜನರ ವಿಸ್ತಾರವಾದ ಜಾನಪದ ಜಾತ್ರೆಯೇ ಈ ಕಥೆಗಳಲ್ಲಿದೆ. ನೂರಾರು ಜಾನಪದ ಕಥೆಗಳು ಬೃಹತ್ಕಥೆಯಲ್ಲಿ ಸೇರ್ಪಡೆಯಾಗಿ ಪ್ರಾಚೀನ ಭಾರತ ಜಾನಪದ ಕಥಾಸಂಪತ್ತು ಎಷ್ಟು ಶ್ರೀಮಂತವಾಗಿತ್ತೆಂಬುದನ್ನು ತಿಳಿಸಿಕೊಡುತ್ತವೆ.

ಪಂಚತಂತ್ರಕ್ಕಿಂತಲೂ ಮೊದಲು ಪಶು ಪಕ್ಷಿಗಳನ್ನು ಪಾತ್ರಧಾರಿಯನ್ನಾಗಿ ಹೊಂದಿದ್ದ ಕಥೆಗಳು ಬೃಹತ್ಕಥೆ, ಮಹಾಭಾರತ, ಉಪನಿಷತ್ತು, ಮುಂತಾದವುಗಳಲ್ಲಿ ಸ್ವಲ್ಪಮಟ್ಟಿಗಾದರೂ ಇದ್ದದ್ದು ಅಲ್ಲಲ್ಲಿ ಕಂಡುಬರುತ್ತದೆ. ಮನುಷ್ಯ ಮತ್ತು ಮೀನು, ಇಂದ್ರನು ಮರ್ಕಟ ಮತ್ತು

ಕಪಿಂಜಲ ಎಂಬ ಹಕ್ಕಿಗಳಾಗಿ ಜನಿಸಿದ್ದು ಮುಂತಾದ ಕಥೆಗಳು ಋಗ್ವೇದದಲ್ಲಿವೆ. ಸತ್ಯಕಾಮ, ಜಾಬಾಲಿಗೆ ಎತ್ತು, ಹಂಸಗಳು ಉಪದೇಶ ನೀಡಿದ ಸಂದರ್ಭಗಳನ್ನು ಕಾಣುತ್ತೇವೆ. ಮಹಾಭಾರತದ ಸಭಾಪರ್ವ, ಕರ್ಣಪರ್ವಗಳಲ್ಲಿ ದೃಷ್ಟಾಂತವಾಗಿ ನಿರೂಪಿಸಲ್ಪಟ್ಟ ಮುದಿಹಂಸದ ಕಥೆ, ಚಿನ್ನದ ಹಿಕ್ಕೆ ಹಾಕುವ ಪಕ್ಷಿಯ ಕಥೆ, ಹಂಸದೊಡನೆ ಕಾಗೆ ಸ್ಪರ್ಧೆ ಹೂಡುವ ಕಥೆ – ಮೊದಲಾದವುಗಳನ್ನು ಉದಾಹರಿಸಲಾಗುತ್ತದೆ. ಮಹಾಭಾರತದಲ್ಲಿ ಬಂದಿರುವ ನಿದರ್ಶನಗಳು ಮುಂದೆ ಪಂಚತಂತ್ರದಲ್ಲಿಯೂ ಹೇಗೆ ಬಂದವೆಂಬುದನ್ನು ಗುರುತಿಸಲು ಈ ಕೆಳಗಿನ ಉದಾಹರಣೆಯನ್ನು ತೆಗೆದುಕೊಳ್ಳಬಹುದು.

ಸಭಾಪರ್ವದಲ್ಲಿ ಶಿಶುಪಾಲನು ಭೀಷ್ಮನನ್ನು ಮೂದಲಿಸುತ್ತ, "ಮುದಿಹಂಸವು ತನ್ನ ಬಳಗದಿಂದಲೇ ಕೊಲ್ಲಲ್ಪಟ್ಟಂತೆ ನೀನೂ ಸಹ ಕೊಲ್ಲಲ್ಪಡುವಿ" ಎಂದು ಹೇಳುತ್ತ ಮುದಿಹಂಸದ ಕಥೆಯನ್ನು ಹೇಳುತ್ತಾನೆ. ಮುದಿ ಹಂಸ ಧರ್ಮವನ್ನು ಉಪದೇಶಿಸಿ ಅದರಂತೆ ನಡೆಯುತ್ತಿರಲಿಲ್ಲ. ಉಳಿದ ಪಕ್ಷಿಗಳು ತಮ್ಮ ತತ್ತಿಗಳನ್ನು ಆ ಹಂಸದ ರಕ್ಷಣೆಯಲ್ಲಿಟ್ಟು ಹೊರಗೆ ಹೋಗುತ್ತಿದ್ದವು. ಹಂಸವು ಪ್ರತಿದಿನವೂ ಆ ತತ್ತಿಗಳನ್ನು ನುಂಗಿ ಬದುಕುತ್ತಿತ್ತು. ಕೊನೆಗೆ ಮಹಾಪ್ರಾಜ್ಞ ಪಕ್ಷಿಯು ಈ ಕ್ರೂರ ಕೃತ್ಯವನ್ನು ಕಂಡು ಉಳಿದ ಪಕ್ಷಿಗಳಿಗೆ ಹೇಳಿತು. ಆಗ ಆ ಎಲ್ಲ ಪಕ್ಷಿಗಳು ಕೂಡಿ ಮುದಿ ಹಂಸವನ್ನು ಕೊಂದು ಹಾಕಿದವು. ಧರ್ಮದ ಹೆಸರಿನಲ್ಲಿ ವಂಚನೆ ನಡೆಯುವ ರೀತಿಯನ್ನು ಹೇಳುವ ಇಂಥ ಕಥೆ ದುರ್ಗಸಿಂಹನ ಪಂಚತಂತ್ರದಲ್ಲಿ "ನಾರಾಯಣಭಟ್ಟನ ಕಥೆ"ಯಲ್ಲಿ ಬಂದಿದೆ. ಧರ್ಮೋಪದೇಶ ಮಾಡುವ ಬಕವು ಮೀನುಗಳನ್ನು ತಿನ್ನುವುದು ಈ ಕಥೆಯಲ್ಲಿದೆ.

ರಾಮಾಯಣ, ಮಹಾಭಾರತ, ಭಾಗವತ, ಉಪನಿಷತ್ತು, ಮುಂತಾದ ಪಂಚತಂತ್ರಕ್ಕಿಂತಲೂ ಪೂರ್ವದಲ್ಲಿಯೇ ರಚನೆಯಾದ ಕೃತಿಗಳಲ್ಲಿ ಬಂದಿರುವ ಪಶುಪಕ್ಷಿಗಳ ಪಾತ್ರಗಳು ಸಂದರ್ಭಾನುಸಾರವಾಗಿ ಅಲ್ಲಿ ಮಾತ್ರ ಬಂದವುಗಳಾಗಿವೆ. ಆದರೆ ಪಂಚತಂತ್ರವು ಸಂಪೂರ್ಣವಾಗಿ ಪ್ರಾಣಿ ಪಕ್ಷಿಗಳನ್ನೇ ಕಥಾ ಪಾತ್ರಗಳನ್ನಾಗಿಸಿಕೊಂಡು ರಚನೆಯಾದ ಕೃತಿಯಾಗಿದೆ. ಪಂಚತಂತ್ರ ಕೃತಿಯ ರಚನೆಯ ಸಮಯಕ್ಕಾಗಲೇ ಈ ರೀತಿಯ ಕೃತಿಗಳ ರಚನೆಗೆ ಒಂದು ಸಾಹಿತ್ಯದ ರೂಪ ಬಂದಿರುವುದು ಸ್ಪಷ್ಟವಾಗುತ್ತದೆ.

ಪಂಚತಂತ್ರವನ್ನು 'ನೀತಿಶಾಸ್ತ್ರ'ವೆಂದು ಕರೆಯಲಾಗುತ್ತದೆ. ನೀತಿ ಎಂದರೆ ಬೇರೆಯವರಿಗೆ ತೊಂದರೆಯಾಗದಂತೆ, ಧರ್ಮಮಾರ್ಗದಲ್ಲಿ ಸಾಗುವುದು. ನೀತಿಶಾಸ್ತ್ರವು ಪ್ರಮುಖವಾಗಿ ಮಾನವನ ನಡತೆಯ ಶಾಸ್ತ್ರ. ಅದು ಜನರ ಕಾರ್ಯಗಳನ್ನು, ನಡುವಳಿಕೆಗಳನ್ನು ಒಳಿತು ಮತ್ತು ಸಾಧುತ್ವಗಳ ಆಧಾರದ ಮೇಲೆ ವಿಮರ್ಶಿಸುತ್ತದೆ. ಧರ್ಮಶಾಸ್ತ್ರ, ಮನಃಶಾಸ್ತ್ರ, ತತ್ವಶಾಸ್ತ್ರ – ಎಲ್ಲವೂ ನೀತಿಶಾಸ್ತ್ರಕ್ಕೆ ಸಂಬಂಧಿಸಿವೆ. ಮನುಷ್ಯ ಮತ್ತು ಸಮಾಜ ಎರಡೂ ವ್ಯವಸ್ಥಿತವಾಗಿ, ಸುಖವಾಗಿ ಇರಬೇಕೆಂದರೆ ಅಲ್ಲಿ ನೀತಿಶಾಸ್ತ್ರದ ಅಳವಡಿಕೆ ಇರಬೇಕು. ಈ ನೀತಿಯ ರಕ್ಷಕ ಅರಸ. ಆದ್ದರಿಂದ ಮುಂದೆ ಅರಸರಾಗಬೇಕಾದ ರಾಜಕುಮಾರರಿಗೆ ಬೋಧಿಸಿ, ಅವರನ್ನು ನೀತಿನಿಪುಣರನ್ನಾಗಿ ಮಾಡುವುದೇ ಈ ಪಂಚತಂತ್ರವೆಂಬ ನೀತಿಶಾಸ್ತ್ರ.

ನೀತಿಕಥೆಯ ಎಲ್ಲ ಲಕ್ಷಣಗಳನ್ನು ಗಮನಿಸಿದಾಗ ಪಂಚತಂತ್ರದ ನೀತಿಕಥೆಗಳು ಉಳಿದ ಎಲ್ಲ ಕಥೆಗಳಿಗಿಂತ ವೈಶಿಷ್ಟ್ಯಪೂರ್ಣವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕಲಾತ್ಮಕ ಕಥಾ ರಚನೆಯಿಂದೊಡಗೂಡಿದ ಈ ಕೃತಿಯು ಕಥಾಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ದೊರಕಿಸಿಕೊಂಡಿದೆ. ಈ ಕಥಾಶೈಲಿಯು ಬೇರಾವ ಸಾಹಿತ್ಯ ಪ್ರಕಾರದಲ್ಲಿ ಕಂಡುಬರುವುದಿಲ್ಲ. ಕಥೆಯ ಒಡಲಲ್ಲಿ ಒಂದು ಕಥೆ, ಅದಕ್ಕೊಂದು ಉಪ ಕಥೆ. ಹಿಂದೆ

ನಡೆದ ಯಾವುದೋ ಒಂದು ಘಟನೆಯನ್ನು ವಿವರಿಸುತ್ತ ಸಮಸ್ಯೆಯ ಪರಿಹಾರ ಮಾರ್ಗವನ್ನು ಹುಡುಕುವುದು, ಹೀಗೆ ವಿಸ್ತಾರವಾಗಿ ಹೊಂದಿಸಿಕೊಂಡಿರುವ ತಂತ್ರರಚನೆಯಲ್ಲಿ ಕಲಾತ್ಮಕ ಪ್ರತಿಭೆಯಿದೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಪಂಚತಂತ್ರ ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವ ಭಾರತೀಯರ ಸಾಹಿತ್ಯಾಭಿರುಚಿ, ಹೊಸತನದ ತುಡಿತ, ಸಮೃದ್ಧ ಜೀವನಕ್ಕಾಗಿ ಆದರ್ಶಗಳ ಬೋಧನೆ, ಬೋಧನೆಗಾಗಿ ಪ್ರಾಣಿಪಕ್ಷಿಗಳ ಪಾತ್ರಗಳ ಮೂಲಕ ಪರೋಕ್ಷ ಮಾರ್ಗದ ಅನುಸರಣೆ, ಮನುಷ್ಯರ ಸ್ವಭಾವಗಳು ಹಾಗೂ ವರ್ತನೆಗಳ ಪರೋಕ್ಷ ವಿವರಣೆ, ಸಮಸ್ಯೆಗಳಿಗೆ ಪರಿಹಾರ ಹುಡುಕುವ ವಿನೂತನ ವಿಧಾನಗಳು ಅಪೂರ್ವವೆನಿಸುತ್ತವೆ. ಜ್ಞಾನಬೋಧೆಯ ಈ ವಿನೂತನ ಶೈಲಿ ಅಪರೂಪದ್ದೆನಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ವರದರಾಜ ಹುಯಿಲಗೋಳ, (1972), ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ.
2. ಹೆಗಡೆ ಎಲ್. ಆರ್., (1976), ಜಾನಪದ ಕಥೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ದೇವುಡು, (1957), ಹೊಸಗನ್ನಡ ಪಂಚತಂತ್ರ, ಬೆಂಗಳೂರು: ಸಾಹಿತ್ಯ ಭಂಡಾರ.
4. ರಂಗಾಚಾರ್ಯ ಎಸ್., (1971), ನೀತಿಶಾಸ್ತ್ರ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.